**<u>ದಿನಾಂಕಃ 10.02.2026 ರಂದು ಸಾಕ್ಷಿಗೆ ಪುನಃ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ನಂ.1 ರ ಪರ ಶ್ರೀ ಬಿ ಎಸ್ ಹೆಚ್ ವಕೀಲರಿಂದ</u>.**

ದಿನಾಂಕಃ 01.02.1956 ರ ಮೂಲ ನೋಂದಾಯಿತ ಪಾಲು ವಿಭಾಗ ಪತ್ರ ನಿಮ್ಮ ಬಳಿ ಇರುತ್ತದೆಯಾ ಅಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಿನಾಂಕಃ 01.02.1956 ರ ನೋಂದಾಯಿತ ಪಾಲು ವಿಭಾಗ ಪತ್ರದ ದೃಢೀಕೃತ ನಕಲನ್ನು ಉಪನೋಂದಣಿ ಕಚೇರಿಯಿಂದ ತೆಗೆಸಿಕೊಂಡಿರುತ್ತೀರಾ ಅಂದರೆ ಸಾಕ್ಷಿ ತೆಗೆಸಿಕೊಂಡಿರುತ್ತೇನೆ ಎನ್ನುತ್ತಾರೆ. ಸಾಕ್ಷಿಗೆ ದಿನಾಂಕಃ 01.02.1956 ರ ಪಾಲು ವಿಭಾಗ ಪತ್ರದ ದೃಢೀಕೃತ ನಕಲನ್ನು ತೋರಿಸಿ ಇದನ್ನು 1 ನೇ ಪ್ರತಿವಾದಿ ಉಪನೋಂದಣಿ ಕಚೇರಿಯಿಂದ ತೆಗೆಸಿರುತ್ತಾನೆ ಅಂದರೆ ಸಾಕ್ಷಿ ನೋಡಿ ಒಪ್ಪಿರುತ್ತಾರೆ ಸದರಿ ದಾಖಲೆಯ ಬೆರಳಚ್ಚು ಪ್ರತಿ ಹಾಜರು ಮಾಡುವ ಷರತ್ತಿಗೆ ಒಳಪಟ್ಟು ನಿಡಿ-1 ಎಂದು ಗುರುತಿಸಲಾಯಿತು. (ನಿಡಿ-1 ರಲ್ಲಿ ಅಕ್ಷರಗಳು ಸ್ಪಷ್ಟವಾಗಿ ಕಾಣುವುದಿಲ್ಲ). ನಿಮ್ಮ ಅಜ್ಜ ಜಿ.ಸಾವಲಿಂಗಪ್ಪ ಯಾವ ದಿನಾಂಕದಂದು ಮರಣ ಹೊಂದಿರುತ್ತಾರೆ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿ ನಿಮ್ಮ ತಂದೆಯ ಹೆಸರಿಗೆ ಯಾವ ವರ್ಷದಿಂದ ಪುರಸಭೆಯ ದಾಖಲೆಗಳಲ್ಲಿ ನಮೂದಾಗಿರುತ್ತದೆ ಅಂದರೆ ಸಾಕ್ಷಿ 1996-97 ರಿಂದ ಎನ್ನುತ್ತಾರೆ. ದಾವಾ ಆಸ್ತಿಯ ದಾಖಲೆಯಲ್ಲಿ ನಿಮ್ಮ ತಂದೆಯ ಹೆಸರು ಯಾವ ಆಧಾರದ ಮೇಲೆ ದಾಖಲಾಗಿರುತ್ತದೆ ಅಂದರೆ ಸಾಕ್ಷಿ ನಮ್ಮ ಅಜ್ಜ ಸಾವಲಿಂಗಪ್ಪನವರಿಂದ ನನ್ನ ತಂದೆ ಮತ್ತು 1 ನೇ ಪ್ರತಿವಾದಿಯ ಹೆಸರಿಗೆ ಜಂಟಿಯಾಗಿ ದಾಖಲಾಗಿರುತ್ತದೆ ಎನ್ನುತ್ತಾರೆ. ದಾವಾ ಆಸ್ತಿಯ ದಾಖಲೆಗಳಲ್ಲಿ ನನ್ನ ಹೆಸರನ್ನು ಸಹ

ನಮೂದಿಸಿ ಎಂದು ನನ್ನ ತಂದೆ ಪುರಸಭೆಗೆ ಅರ್ಜಿ ಕೊಟ್ಟಿಲ್ಲ ಅಂದರೆ ಸಾಕ್ಷಿ ನನ್ನ ತಂದೆಯ ಅಣ್ಣ ದಾವಾ ಸ್ವತ್ತನ್ನು ನೋಡಿಕೊಳ್ಳುತ್ತಿದ್ದ ಕಾರಣ ಅವರೆ ಅರ್ಜಿ ಕೊಟ್ಟಿರುತ್ತಾರೆ ಎನ್ನುತ್ತಾರೆ. ದಾವಾ ಸ್ವತ್ತಿನ ದಾಖಲೆಯಲ್ಲಿ ನನ್ನ ತಂದೆಯ ಹೆಸರು ಸೇರಿಸಲು ಪುರಸಭೆಯಲ್ಲಿ ಹಕ್ಕು ಬದಲಾವಣೆಯ ಆದೇಶ ಆಗಿಲ್ಲ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಂದೆ ಯಾವತ್ತು ಸಹ ದಾವಾ ಆಸ್ತಿಯ ಕಂದಾಯವನ್ನು ಪುರಸಭೆಗೆ ಪಾವತಿ ಮಾಡಿರುವುದಿಲ್ಲ ಅಂದರೆ ಸಾಕ್ಷಿ ನನ್ನ ತಂದೆ ಹಣ ಕೊಡುತ್ತಿದ್ದರು 1 ನೇ ಪ್ರತಿವಾದಿ ಕಂದಾಯ ಪಾವತಿ ಮಾಡಿರುತ್ತಾರೆ ಎನ್ನುತ್ತಾರೆ. ನಿಮ್ಮ ತಂದೆ 1 ನೇ ಪ್ರತಿವಾದಿಗೆ ಕಂದಾಯ ಪಾವತಿ ಮಾಡಲು ಹಣ ಕೊಟ್ಟ ಬಗ್ಗೆ ದಾಖಲೆ ಇದೆಯಾ ಅಂದರೆ ಸಾಕ್ಷಿ ನಗದ ರೂಪದಲ್ಲಿ ಕೊಟ್ಟಿರುತ್ತಾರೆ ದಾಖಲೆ ಇರುವುದಿಲ್ಲ ಎನ್ನುತ್ತಾರೆ. 1 ನೇ ಪ್ರತಿವಾದಿ ದಾವಾ ಸ್ವತ್ತಿನ ಸಂಪೂರ್ಣ ಜವಾಬ್ದಾರಿ ನಾನೇ ತೆಗೆದುಕೊಳ್ಳುತ್ತೇನೆಂದು ನನ್ನ ತಂದೆಗೆ ಭರವಸೆ ಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಾವಾ ಸ್ವತ್ತಿನ ಸಂಪೂರ್ಣ ಜವಾಬ್ದಾರಿ ನಾನೇ ತೆಗೆದುಕೊಳ್ಳುತ್ತೇನೆಂದು ನಿಮ್ಮ ತಂದೆಗೆ ಬರೆದುಕೊಳ್ಳ ಬಗ್ಗೆ ಏನಾದರೂ ಲಿಖಿತ ದಾಖಲೆ ಇದೆಯಾ ಅಂದರೆ ಸಾಕ್ಷಿ ಲಿಖಿತ ದಾಖಲೆ ಇರುವುದಿಲ್ಲ ಆದರೆ ನನ್ನ ತಂದೆ ಆ ಬಗ್ಗೆ ಹೇಳಿರುತ್ತಾರೆ ಎನ್ನುತ್ತಾರೆ. ನನ್ನ ತಂದೆ ದತ್ತಕ ಹೋದಾಗಿನಿಂದ ನಾಗಮ್ಮ ಕೋಂ ಬಸವಣ್ಣಪ್ಪನವರ ದತ್ತು ಮಗನಾಗಿ ಬೆಳೆದು ಬಂದಿರುತ್ತಾರೆ ಅಂದರೆ ಸರಿಯಲ್ಲ. ನಾಗಮ್ಮ ಕೋಂ ಬಸವಣ್ಣಪ್ಪರವರ ಕುಟುಂಬದ ಆಸ್ತಿಗಳು ನಮ್ಮ ತಂದೆಗೆ ಬಂದಿರುತ್ತವೆ ಅಂದರೆ ಸರಿಯಲ್ಲ. ಭದ್ರಾವತಿಯಲ್ಲಿ ನನ್ನ ತಂದೆ ಆಸ್ತಿಗಳನ್ನು ಮಾಡಿರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುವುದೇನೆಂದರೆ ಭದ್ರಾವತಿಯ

ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ವಸತಿ ಗೃಹದಲ್ಲಿ ವಾಸ ಇದ್ದರು ಎನ್ನುತ್ತಾರೆ. 1 ನೇ ವಾದಿ ಭದ್ರಾವತಿಯ ಯಾವ ಮನೆಯಲ್ಲಿ ವಾಸ ಇರುತ್ತಾರೆ ಅಂದರೆ ಸಾಕ್ಷಿ ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ವಸತಿ ಗೃಹದಲ್ಲಿ ವಾಸ ಇರುತ್ತಾರೆ ಎನ್ನುತ್ತಾರೆ. ನಿಮ್ಮ ತಾಯಿಯ ಹೆಸರು ಗೌರಮ್ಮ ಇರುತ್ತದೆ ಅಂದರೆ ಸಾಕ್ಷಿ ಗೌರಮ್ಮ ಯಾನೆ ಪ್ರೇಮಮ್ಮ ಇರುತ್ತದೆ ಎನ್ನುತ್ತಾರೆ. ನಮ್ಮ ತಂದೆ–ತಾಯಿಯ ಮಕ್ಕಳ ಪೈಕಿ ನಾನು ಹಿರಿಯ ಮಗಳು, 1 ನೇ ವಾದಿ ಕಿರಿಯ ಮಗ ಮತ್ತು 4 ನೇ ವಾದಿ ನನ್ನ ತಂಗಿ ಇರುತ್ತಾರೆ ಅಂದರೆ ಸರಿ. ನೀವು ಯಾವ ಇಸವಿಯಲ್ಲಿ ಜನಿಸಿರುತ್ತೀರಿ ಅಂದರೆ ಸಾಕ್ಷಿ 1975 ರಲ್ಲಿ ಎನ್ನುತ್ತಾರೆ. ಸೊರಬದ ಚಾಮರಾಜಪೇಟೆಯಲ್ಲಿದ್ದ ಮನೆ ಮತ್ತು ಖಾಲಿ ಜಾಗ ನನ್ನ ತಂದೆಗೆ ಅವರ ದತ್ತು ತಾಯಿಯಿಂದ ಬಂದಿರುತ್ತದೆ ಅಂದರೆ ಸರಿಯಲ್ಲ. ಚಾಮರಾಜಪೇಟೆಯಲ್ಲಿದ್ದ ಮನೆ ಮತ್ತು ಖಾಲಿ ಜಾಗದ ದಾಖಲೆಗಳು ನನ್ನ ತಂದೆಯ ಹೆಸರಲ್ಲಿ ಇದ್ದವು ಅಂದರೆ ಸರಿಯಲ್ಲ. ನನ್ನ ತಂದೆ ಭದ್ರಾವತಿಯಲ್ಲಿದ್ದ ಕಾರಣ ಚಾಮರಾಜಪೇಟೆಯಲ್ಲಿದ್ದ ಮನೆ ಮತ್ತು ಜಾಗವನ್ನು ಬಾಡಿಗೆಗೆ ಕೊಟ್ಟಿದ್ದರು ಅಂದರೆ ಸರಿಯಲ್ಲ. ಚಾಮರಾಜಪೇಟೆಯಲ್ಲಿದ್ದ ಮನೆ ಮತ್ತು ಖಾಲಿ ಜಾಗದ ಬಗ್ಗೆ ಈ ಹಿಂದೆ ವ್ಯಾಜ್ಯ ನಡೆದು ನನ್ನ ತಂದೆ ಶಿವಮೊಗ್ಗ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿದ್ದರು ಅಂದರೆ ಸರಿಯಲ್ಲ. ನಮ್ಮ ತಂದೆಯ ಆದಾಯ ಕಡಿಮೆ ಇತ್ತು ಅಂದರೆ ಸಾಕ್ಷಿ ನಮ್ಮ ತಂದೆಗೆ ಗೊತ್ತು ಎನ್ನುತ್ತಾರೆ. ನಮ್ಮ ತಂದೆಗೆ ಚಾಮರಾಜಪೇಟೆಯ ಆಸ್ತಿಯ ಮೇಲಿದ್ದ ವ್ಯಾಜ್ಯವನ್ನು ನಡೆಸಲು ಹಣಕಾಸಿನ ತೊಂದರೆ ಇತ್ತು ಅಂದರೆ ಸರಿಯಲ್ಲ. ನನ್ನ ತಂದೆ ಮತ್ತು ತಾಯಿಯವರು ನನ್ನ

ತಂದೆಗೆ ಅವರ ದತ್ತು ತಾಯಿಯಿಂದ ಬಂದ ಸೊರಬದ ಚಾಮರಾಜಪೇಟೆಯಲ್ಲಿದ್ದ ಮನೆಯನ್ನು ದಿನಾಂಕಃ 25.03.1991 ರಂದು ನೋಂದಾಯಿತ ಕ್ರಯಪತ್ರದ ಮೂಲಕ ಬೆನ್ನೂರು ಮಂಜುನಾಥ ಮತ್ತು ನಾಗರಾಜ ರವರಿಗೆ ಮಾರಾಟ ಮಾಡಿರುತ್ತಾರೆ ಅಂದರೆ ಸರಿಯಲ್ಲ. ದಿನಾಂಕಃ 25.03.1991 ರ ಕ್ರಯಪತ್ರದಲ್ಲಿ 1 ನೇ ಪ್ರತಿವಾದಿ ಪಕ್ಷಗಾರ ಇರಲಿಲ್ಲ ಅಂದರೆ ಸಾಕ್ಷಿ ಸುಳ್ಳು ಇರುತ್ತದೆ ಎನ್ನುತ್ತಾರೆ. ನನ್ನ ತಂದೆ ನಾಗಮ್ಮ ಕೋಂ ಬಸವಣ್ಣೆಪ್ಪನವರಿಗೆ ದತ್ತಕಕ್ಕೆ ಹೋದಾಗಿನಿಂದ ಪ್ರತಿವಾದಿಯ ಕುಟುಂಬದ ಸದಸ್ಯರು ಆಗಿರಲಿಲ್ಲ ಅಂದರೆ ಸರಿಯಲ್ಲ. ಭದ್ರಾವತಿಯ ಕಾರ್ಖಾನೆಯಲ್ಲಿ ವಾಸ ಇದ್ದುದ್ದನ್ನು ಹೊರತುಪಡಿಸಿ ನನ್ನ ತಂದೆ ಭದ್ರಾವತಿಯಲ್ಲಿ ಆಸ್ತಿಗಳನ್ನು ಸಂಪಾದಿಸಿರುತ್ತಾರೆ ಅಂದರೆ ಸರಿಯಲ್ಲ. ನನ್ನ ತಂದೆ ಸಂಪಾದಿಸಿದ ಆಸ್ತಿಗಳ ಬಗ್ಗೆ ನಾನು ವಿವರಣೆ ನೀಡುತ್ತಿಲ್ಲ ಅಂದರೆ ಸಾಕ್ಷಿ ನನ್ನ ತಂದೆ ಯಾವುದೇ ಆಸ್ತಿ ಸಂಪಾದಿಸಿರುವುದಿಲ್ಲ ಎನ್ನುತ್ತಾರೆ. ಪ್ರತಿವಾದಿಗಳು ನನ್ನ ತಂದೆಯ ಆಸ್ತಿಗಳಲ್ಲಿ ಹಿಸ್ಸೆ ಕೇಳಬಾರದೆಂದು ನಾನು ಮುಚ್ಚಿಡುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ತಂದೆ ಮತ್ತು ಪ್ರತಿವಾದಿ ನಂ.1 ರವರು ಒಟ್ಟಾಗಿ ಯಾವುದೇ ಕುಟುಂಬದ ಕಾರ್ಯಕ್ರಮಗಳನ್ನು ಮತ್ತು ವ್ಯವಹಾರಗಳನ್ನು ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ನಿಮ್ಮ ತಂದೆ ಯಾವಾಗ ಮರಣ ಹೊಂದಿರುತ್ತಾರೆ ಅಂದರೆ ಸಾಕ್ಷಿ 2008 ರಲ್ಲಿ ಎನ್ನುತ್ತಾರೆ. ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ವಸತಿ ಗೃಹವನ್ನು ನಿಮ್ಮ ಹೆಸರಿಗೆ ಬದಲಾಯಿಸಿಕೊಂಡಿರುತ್ತೀರಾ ಅಂದರೆ ಸಾಕ್ಷಿ 1 ಮತ್ತು 2 ನೇ ಪ್ರತಿವಾದಿಯ ಹೆಸರಲ್ಲಿ ಇರುತ್ತದೆ ಎನ್ನುತ್ತಾರೆ. ನಿಮ್ಮ ತಂದೆ ಯಾವುದೇ ದಾನಪತ್ರ ಮತ್ತು ಮೃತ್ಯುಪತ್ರ

ಮಾಡಿರುವುದಿಲ್ಲ ಅಂದರೆ ಸರಿ. 2008 ನೇ ಇಸವಿಯಿಂದ ದಾವಾ ಆಸ್ತಿಯ ಬಗ್ಗೆ ನೀವು ಮತ್ತು 1 ನೇ ಪ್ರತಿವಾದಿ ಜೊತೆಯಾಗಿ ಯಾವುದೇ ವ್ಯವಹಾರ ಮಾಡಿಲ್ಲ ಅಂದರೆ ಸಾಕ್ಷಿ ಆಸ್ತಿಯನ್ನು ಅವರೆ ನೋಡಿಕೊಳ್ಳುತ್ತಿದ್ದರು ವರ್ಷಕೊಮ್ಮೆ ನಮ್ಮನ್ನು ಕರೆಯಿಸಿ ಬಾಗಿನ ಕೊಡುತ್ತಿದ್ದರು ಮತ್ತು ಸಹಿ ಮಾಡಿ ಕೊಡಿ ಎಂದು ಕೇಳುತ್ತಿದ್ದರು ಎನ್ನುತ್ತಾರೆ. 2008 ನೇ ಇಸವಿಯಿಂದ 2025 ನೇ ಇಸವಿಯವರೆಗೆ ನೀವು ಸಹಿ ಮಾಡಿಲ್ಲ ಅಂದರೆ ಸಾಕ್ಷಿ ಅವರು ಪತ್ರ ತೋರಿಸಿಲ್ಲ ಸುಮ್ಮನೆ ಸಹಿ ಮಾಡಿ ಎಂದು ಹೇಳುತ್ತಿದ್ದರು ಎನ್ನುತ್ತಾರೆ. ದಾವಾ ಆಸ್ತಿಯನ್ನು 1 ನೇ ಪ್ರತಿವಾದಿ ಯಾರಿಗೆ ಬಾಡಿಗೆ ಕೊಟ್ಟಿರುತ್ತಾರೆಂದು ನಿಮಗೆ 2008 ನೇ ಇಸವಿಯಿಂದ 2025 ರವರೆಗೂ ಗೊತ್ತಿರುವುದಿಲ್ಲ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಎಷ್ಟು ರೂಪಾಯಿಗೆ ಬಾಡಿಗೆ ಕೊಟ್ಟಿರುತ್ತಾರೆಂದು ನಿಮಗೆ ಗೊತ್ತಿಲ್ಲ ಅಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಬಾಡಿಗೆ ಹಣದಲ್ಲಿ ನಾನಾಗಲಿ ಅಥವಾ ಇತರೆ ವಾದಿಗಳಾಗಲಿ ಪಾಲು ಪಡೆದಿರುವುದಿಲ್ಲ ಅಂದರೆ ಸಾಕ್ಷಿ ಪಾಲು ಪಡೆದಿಲ್ಲ ಆದರೆ 1 ನೇ ಪ್ರತಿವಾದಿ ನನಗೆ ಕರೆಯಿಸಿ ಬಾಗಿನ ಕೊಡುತ್ತಿದ್ದರು ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ ನನ್ನ ತಂದೆಗೆ ಪಾಲು ಇರದ ಕಾರಣ ಅವರು ಮರಣ ಹೊಂದುವವರೆಗೂ ಪಾಲು ಕೇಳಿರುವುದಿಲ್ಲ ಅಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿಯ ಬಗ್ಗೆ ನಿಮಗೆ ಹೆಚ್ಚಿನ ಮಾಹಿತಿಯನ್ನು ಯಾರು ನೀಡಿರುತ್ತಾರೆ ಅಂದರೆ ಸಾಕ್ಷಿ ನನ್ನ ತಂದೆ, ಬಂಧು-ಬಳಗದವರು ಮಾಹಿತಿ ನೀಡಿರುತ್ತಾರೆ ಮತ್ತು ನಾನು ನನ್ನ ಗಂಡನ ಊರಿಗೆ ಓಡಾಡುವಾಗ ನೋಡಿ ಮಾಹಿತಿ ತಿಳಿದುಕೊಂಡಿರುತ್ತೇನೆ ಎನ್ನುತ್ತಾರೆ. ದಾವಾ ಆಸ್ತಿಯ ಪಶ್ಚಿಮಕ್ಕೆ ಯಾರ ಆಸ್ತಿ ಇರುತ್ತಾರೆ

ಅಂದರೆ ಸಾಕ್ಷಿ ನಟರಾಜ್ ರವರ ಆಸ್ತಿ ಇರುತ್ತದೆ ಎನ್ನುತ್ತಾರೆ. ದಾವಾ ಆಸ್ತಿಯ ಪಶ್ಚಿಮಕ್ಕೆ ಲತಾ ಕೋಂ ದಿವಂಗತ ಬಸವರಾಜ ಉಪ್ಪಿನರವರ ಆಸ್ತಿ ಇರುತ್ತದೆ ಅಂದರೆ ಸಾಕ್ಷಿ ನಟರಾಜ್ ರವರ ಆಸ್ತಿ ಇರುತ್ತದೆ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ ಪಶ್ಚಿಮ ಗೋಡೆಯ ಬಗ್ಗೆ 1 ನೇ ಪ್ರತಿವಾದಿ, ಲತಾ ಹಾಗೂ ಅವರ ಮಗಳು ಅಶ್ವಿನಿ ವಿವಾದ ಆಗಿತ್ತು ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆ ಬಗ್ಗೆ 1 ನೇ ಪ್ರತಿವಾದಿಯವರು ನ್ಯಾಯಾಲಯದಲ್ಲಿ ಕೇವಿಯೇಟ್ ಸಲ್ಲಿಸಿದ್ದರು ಅದನ್ನು ನಾವು ಹಾಜರುಪಡಿಸಿರುತ್ತೇವೆ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಲತಾ ಮತ್ತು ಅಶ್ವಿನಿಯವರು ನನ್ನನ್ನು ಸಂಪರ್ಕಿಸಿ ದಾವಾ ಆಸ್ತಿಯ ಬಗ್ಗೆ ಮಾಹಿತಿ ಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. ನನ್ನ ತಂದೆ ನಾಗಮ್ಮ ಕೋಂ ಬಸವಣ್ಣೆಪ್ಪರವರಿಗೆ ದತ್ತಕಕ್ಕೆ ಹೋದ ನಂತರ ದಾಖಲೆಗಳಲ್ಲಿ ಬದಲಾವಣೆ ಆಗಿರುವುದಿಲ್ಲ ಅಂದರೆ ಸಾಕ್ಷಿ ನನ್ನ ತಂದೆ ದತ್ತಕಕ್ಕೆ ಹೋಗಿಲ್ಲ ಎನ್ನುತ್ತಾರೆ. ಸರ್ಕಾರದ ಸೌಲಭ್ಯ ಪಡೆಯಲು ಮತ್ತು ಜೀವನಕ್ಕೆ ಆದಾಯಗಳಿಸಲು ನನ್ನ ತಂದೆ ತಮ್ಮ ಪೂರ್ವ ಕುಟುಂಬದ ದಾಖಲೆಗಳನ್ನು ಮುಂದೂವರೆಸಿಕೊಂಡು ಬಂದಿರುತ್ತಾರೆ ಅಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿಯಲ್ಲಿ ಹಕ್ಕು ಇರುವುದಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪಾಲು ಪಡೆಯುವ ಸಂಬಂಧ ಸರಿಯಾಗಿ ಸಾಕ್ಷಿ ನುಡಿಯುತ್ತಿಲ್ಲ ಅಂದರೆ ಸರಿಯಲ್ಲ.

**ಪಾಟಿ ಸವಾಲುಃ** ಪ್ರತಿವಾದಿ ನಂ.2 ರ ಪರ ವಕೀಲರು ಪ್ರತಿವಾದಿ ನಂ.1 ರ ಪರ ವಕೀಲರು ಮಾಡಿದ ಪಾಟಿ ಸವಾಲನ್ನು ಮೆಮೊ ಸಲ್ಲಿಸಿ ಅಳವಡಿಸಿಕೊಂಡಿರುತ್ತಾರೆ.

**<u>ಮರುವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.